to escape by providing them with a tractor. So he has been apprehended on 15th April 1975 as an abettor of the crime. The Superintendent of Police has also ascertained that a driver from Tumkur was temporarlily employed to drive the tractor in which theaccused persons escaped from the scene of crime and is making efforts to trace this driver. So, the total number of accused persons comes to eight, for the present. Two have been arrested so far. Efforts are continued to apprehend the remaining accused.

† ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷಣಿಯವರೇ, ಈ ಕೇಸ್ ಬಗ್ಗೆ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಿದರು. ೮-೪-೧೯೭೫ರಲ್ಲಿ ನಡೆದಂಥ ಒಂದು ಕೊಲೆಯ ಪ್ರಕರಣದಲ್ಲಿ ಇವತ್ತು ಈಗಾಗಲೇ ಸಿ ಓ.ಡಿ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆಂದು ಹೇಳಿದ್ದಾರೆ. ಆದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಸರ್ಕಾರ ತನಿಖೆಯಲ್ಲಿ ಯಾವ ರೀತಿ ಅಪರಾಧಿಗಳನ್ನು ಪತ್ತೆ ಹಚ್ಚಬೇಕೆಂಬುದರಲ್ಲಿ ಒಂದು ನಿರ್ಣಯ ತೆಗೆದುಕೊಳ್ಳುವುದು ಸರ್ಕಾರಕ್ಕೆ ಬಿಟ್ಟಿರುವ ವಿಷಯ. ಆದರೆ ೮-೪-೧೯೭೫ರಲ್ಲಿ ನಡೆದಂಥ ಕೊಲೆ ಮೊಕದ್ದಮೆಗೆ ಪೋಲೀಸ್ ಇಲಾಖೆಯವರು ತೋರಿಸಿರತಕ್ಕ ತೀವ್ರತೆ. ಯಾರು ಅವತ್ತು ಶ್ರೀಮಾನ್ ಚನ್ನಬಸಪ್ಪನವರು ಎಂದು ಹೇಳಿದರಲ್ಲಾ ಅವರ ಕಡೆ ೧೦ ಜನ ಕಾಂಗ್ರೆಸ್ (ಆರ್) ಸೇರಿದವರಿದ್ದರು. ಅವರ ಕಡೆ ಕೆಲವು ವಿವರಣೆಗಳನ್ನು ಕೊಟ್ಟು ಹೇಳಿದ್ದಾರೆ. ಇವತ್ತು ಪೋಲೀಸ್ ಇಲಾಖೆಯವರನ್ನು ತೋರಿಸಿದ್ದರೆ ಬಹುಶಃ ಎರಡನೆ ಕೊಲೆ ಆಗುತ್ತಿರಲಿಲ್ಲ. ಇವತ್ತು ಕೆಲವು ಆಕ್ಷೇಪಣೆಗಳನ್ನು ಎತ್ತಿದರು. ನನ್ನ ಮುಂದೆ ಆದಕ್ಕೆ ಸಂಬಂಧಪಟ್ಟ ಫೈಲು ಇಲ್ಲ. ಈ ಸಭೆಯಲ್ಲಿಯೇ ಎರಡು ತಿಂಗಳುಗಳ ಹಿಂದೆ ಸಾಕಷ್ಟು ಚರ್ಚೆ ನಡೆದು ಆದನ್ನು ಎಸ್.ಪಿ. ಗೆ ಯಾವತ್ತು ಆರ್ಡರ್ ಮಾಡಿದರೆಂಬ ಬಗ್ಗೆ ನಾಳೆ ಬೇಕಾವರೆ ಸಭೆಗೆ ತಿಳಿಸಿ ಅವರು ಎಷ್ಟು ದಿವಸಗಳವರೆಗೆ ಕಾಯಿಲೆ ಬಿದ್ದಿದ್ದರು ? ಬೇರೆಯವರಿಗೆ ಏನೆಂದು ಆಥರೈಜ್ ಮಾಡಿದ್ದೀರಿ, ಅವರಂ ವಿಚಾರಣೆ ಮುಗಿಸಿದ್ದು ಎಂದು ? ಯಾವ ಕಾರಣದಿಂದ ಡಿಲೇ ಆಯಿತೆಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಎಸ್. ಪಿ. ಅವರು ಕಾಯಿಲೆ ಬಿದ್ದರು. ಈಗ ಅವರ ಚಾರ್ಜನ್ನು ನ್ಚಾರ್ಜ್ ಎಸ್.ಪಿ.ಗೆ ಮಹಿಸಿದ್ದರು. ಅವರು ಚಾರ್ಜ್‌ಷೀಟ್ ಹಾಕುವುದಕ್ಕೆ ತಡವಾಗುತ್ತತೆಂದು ಹೇಳಿದರು. ನಾನು ಆದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಇದಾದಮೇಲೆ ಸರ್ಕಾರದಿಂದ ಅವರಿಗೇನು ಡೈರೆಕ್ಷನ್ ಕೊಟ್ಟಿರಿ ? ಅವರಿಗೆ ಏನು ನಿರ್ದೇಶನ ಕೊಟ್ಟಿರಿ. ವಿಚಾರಣೆ ಏಂದು ಮುಗಿಯಿತು ? ಅವರ ವಿಚಾರಣೆಯಲ್ಲಿ ಅಪರಾಧಿ ಇಂತಹವರೆಂದು ಪತ್ತೆಯಾಯಿತೇ ? ಕೋರ್ಟಿನವರು ಏನು ಹೇಳಿದಾರೆ, ಅವರಿಗೆ ಸಂಬಂಧಪಟ್ಟವರಿಂದ ಕೇಸ್ ಕನ್‌ವಿನ್ಸ್ ಮಾಡುವುದರಲ್ಲಿ ವಿಫಲರಾಗಿದ್ದಾರೆ. ಆಫಿಡವಿಟ್ ಇಲ್ಲ. ಎರಡು ಕೋರ್ಟ್‌ಗಳ ಜಡ್ಜ್‌ಮೆಂಟ್‌ಗಳನ್ನು ತರಿಸಿ. ನಾವು ಅವರನ್ನು ಹಿಡಿಯುವ ರೀತಿ ನೀತಿ ಪೋಲೀಸ್ ಅಧಿಕಾರಿಗಳಿಗೆ ಮಾರ್ಗದರ್ಶನವಾಗಬೇಕು. ಪಬ್ಲಿಕ್ ಪ್ರಾಸಿಕ್ಯೂಟರ್ ಏನು ಹೇಳಿದ್ದಾರೆ, ಎಸ್ ಪಿ. ಏನು ಹೇಳಿದ್ದಾರೆ ಎಂಬುದನ್ನೆಲ್ಲಾ ನಾಳೆ ಈ ಸಭೆಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಸಿ. ಬೈರೇಗೌಡ.—ಪೋಲೀಸ್ ಡಿಪಾರ್ಟ್‌ಮೆಂಟಿನ ಮೊದಲನೆಯ ಕರ್ತವ್ಯ ಆ ಕೃತ್ಯ ನಡೆದ ಕೂಡಲೇ ಸರಿಯಾದ ಬಂದೋಬಸ್ತ್ ಮಾಡಬೇಕಾಗಿತ್ತು. ಹಾಗೆ ಮಾಡಿದ್ದರೆ ಈಗ ನಡೆದಿರುವ ಕೃತ್ಯ ನಡೆಯಂವುದಕ್ಕೆ ಅವಕಾಶವಿರುತ್ತಿರಲಿಲ್ಲ. ಅವರು ಸರಿಯಾಗಿ ಬಂದೋಬಸ್ತ್ ಮಾಡಿರಲಿಲ್ಲ. ಆಪರು ಏತಕ್ಕೋಸ್ಕರ ಸರಿಯಾದ ಮುಂಜಾಗ್ರತೆ ವಹಿಸಲಿಲ್ಲವೋ ಆದಕ್ಕೆ ಅವರ ಮೇಲೆ ದಯಮಾಡಿ ಕ್ರಮ ತೆಗೆದುಕೊಳ್ಳಬೇಕು.

(ii) *re* : propriety of the Minister of State for Electricity in holding Positions in Several Co-operative Institutions.

ಶ್ರೀ ಎಚ್. ಡಿ. ದೇವೇಗೌಡ.—ನಾನು ರೂಲ್ ೩೧೨ರ ಪ್ರಕಾರ ಒಂದು ನೋಟೀಸ್ ಕಳುಹಿಸಿದ್ದೇನೆ ಶ್ರೀ ಮಾನ್ ಶ್ರೀಕಂಠಯ್ಯನವರು, ವಿದ್ಯುಚ್ಛಕ್ತಿ ಖಾತೆಯ ಸಚಿವರಾಗಿದ್ದಾರೆ. ಅವರು ಮಂತ್ರಿಗಳಾಗಿದ್ದು ಆದರ ಜೊತೆಗೆ ಕೆಲವು ಸಂಘ ಸಂಸ್ಥೆಗಳಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಾಗೂ ಡೈರೆಕ್ಟರ್ ಆಗಿ ಇನ್ನೂ ಮುಂದುವರಿಯುತ್ತಿದ್ದಾರೆ. ಈ ಬಗ್ಗೆ ಈಗಾಗಲೇ ಚರ್ಚೆಯಾಗಿ ಮಾನ್ಯ ಮುಖ್ಯ ಮಂತ್ರಿಗಳು ನಾನು ನಿರ್ದೇಶನ ಕೊಟ್ಟಿದ್ದೇನೆಂದು ಹೇಳಿದ್ದಾರೆ. ಇದೇ ಉತ್ತರವನ್ನು ಮೇಲ್ಮನೆಯಲ್ಲಿಯೂ ಹೇಳಿದ್ದಾರೆ. ಆದು ಹೇಳಿ ಇಲ್ಲಿಗೆ ಸುಮಾರು ೩ ತಿಂಗಳಾದರೂ ಕೂಡ ಮಾನ್ಯ

ಶ್ರೀಕಂಠಯ್ಯನವರು ನನಗೆ ಗೊತ್ತಿರುವ ಹಾಗೆ ಇನ್ನು ಕೆಲವು ಸಂಘ ಸಂಸ್ಥೆಗಳನ್ನು ಅವರ ಅಧ್ಯಕ್ಷತೆಯಲ್ಲಿ ಇಟ್ಟುಕೊಂಡಿದ್ದಾರೆ. ಅವು ಯಾವುದು ಎಂದರೆ ಕರ್ನಾಟಕ ಸೀಡ್ಸ್ ಫೆಡರೇಷನ್ ಮತ್ತು ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಹಾಗೂ ಇನ್ನೊಂದು ಫರ್ಟಿಲೈಸರ್ ಕಂಪನಿ, ಇವುಗಳನ್ನು ಇಟ್ಟುಕೊಂಡಿದ್ದಾರೆಂದು ಕೇಳಿದ್ದೇನೆ. ಈ ಸಭೆ ನಾಳೆ ಮುಂಗಿದುಹೋಗುತ್ತದೆ. ಆದ್ದರಿಂದ ತಾವು ಕೊಟ್ಟಂಥ ಹೇಳಿಕೆ ಪ್ರಕಾರ ಈಗಾಗಲೇ ಮಂತ್ರಿಗಳು ಅವುಗಳೆಲ್ಲಕ್ಕೂ ರಾಜೀನಾಮೆಯನ್ನು ಕೊಟ್ಟಿದ್ದಾರೆಯೇ ? ಯಾವಾಗ ಅವನ್ನು ಬಿಟ್ಟುಕೊಡುತ್ತಾರೆ, ತಾವು ಹೇಳಿದ್ದನ್ನು ಕಾರ್ಯರೂಪಕ್ಕೆ ತರುತ್ತೀರೆಂದು ದಯ ಮಾಡಿ ತಿಳಿಸಬೇಕಾಗುತ್ತದೆ.

ಶ್ರೀ ಡಿ ದೇವರಾಜ್ ಅರಸ್.—ಈ ವಿಚಾರದಲ್ಲಿ ನಾನು ಸ್ಪಷ್ಟವಾಗಿ ಅಭಿಪ್ರಾಯ ಹೇಳಿದ್ದೇನೆ. ಇದಕ್ಕೆ ಯಾವ ಲೀಗರ್ ಬಾರ್ ಇಲ್ಲ. ಆದರೆ ಅವರು ಮಂತ್ರಿಗಳಾದ ಮೇಲೆ ಅವುಗಳಲ್ಲಿ ಮುಂದುವರಿಯುವ ಅಗತ್ಯವಿಲ್ಲವೆಂದು ಅವರೇ ಎಲ್ಲವನ್ನೂ ಬಿಡುವುದಕ್ಕೆ ಸಿದ್ಧರಿದ್ದಾರೆ ಎಂದು ಹೇಳಿದ್ದೇನೆ. ಅದೇ ಮಾತನ್ನು ಮತ್ತೆ ಮತ್ತೆ ಕೇಳುವ ಪ್ರಶ್ನೆ ಇಲ್ಲ. ಇದರ ಬಗ್ಗೆ ನಾನು ಹಿಂದೆ ಸ್ಪಷ್ಟವಾಗಿ ಹೇಳಿದ್ದೇನೆ. ಈಗಲೂ ಅದೇ ಹೇಳುತ್ತೇವೆ. ಇನ್ನು ಹೆಚ್ಚಿಗೆ ಏನನ್ನು ಹೇಳುವ ಪ್ರಶ್ನೆ ಇಲ್ಲ.

ಶ್ರೀ ಎಂ. ಎಸ್ ಕೃಷ್ಣನ್.—ಇವತ್ತಿನ ದಿವಸ ಮತ್ತೆ ಮತ್ತೆ ಹೇಳಬೇಕಾಗಿಲ್ಲ. ಅದನ್ನು ನಾವು ಒಪ್ಪುತ್ತೇವೆ. ಆದರೆ ಅವರು ಇನ್ನು ಅಂಟಿಕೊಂಡಿದ್ದರೆ ತಾವಾದರೂ ವತ್ಯಾಯ ಮಾಡಿ ಅವನ್ನು ಬಿಡಿಸಲೇಬೇಕಾಗುತ್ತದೆ. ಇದರ ಬಗ್ಗೆ ಹೇಳಬೇಕು

ಶ್ರೀ ಡಿ. ದೇವರಾಜ ಅರಸ್.—ಮತ್ತೆ ಹೇಳುವ ಪ್ರಶ್ನೆ ಬರುವುದಿಲ್ಲ. ಆಗಲೇ ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಹೇಳಿದಿರಿ ಇದಕ್ಕೆ ಲೀಗಲ್ ಬಾರ್ ಇಲ್ಲವೆಂದು.

SRI D. DEVARAJ URS.—There cannot be any compulsion on anybody's part that he should not remain or he should remain.

SRI H. D. DEVEGOWDA —The Hon Chief Minister has stated earlier that he had asked the Minister to relinquish all his offices.

SRI D. DEVARAJ URS.—Even now I repeatedly say the same thing

SRI H. D. DEVEGOWDA.—The Government has nominated him for the Seed Corporation.

SRI D. DEVARAJ URS.—We have done it. Legally there is no bar for the Minister to continue that. I have said previously and even now I reiterate. Even otherwise, because it may not be proper for a Minister to continue in so many capacities, I have requested the Minister to see as far as possible that he dissociate himself with the position and he has done in several cases and in other cases, he is going to do it shortly.

REPORT OF THE JOINT SELECT COMMITTEE ON KARNATAKA MUNICIPAL CORPORATION BILL 1974 *PRESENTATION*

SRI D. K. NAIKAR (Minister for Law and Municipal Administration).—Madam Speaker, as Chairman of the Joint Select Committee on Karnataka Municipal Corporations Bill, 1974, I beg to present the report of the Joint Select Committee on Karnataka Municipal Corporations Bill, 1974.